**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 27.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್ ಜಿ ಬಿ ವಕೀಲರಿಂದಃ**

ನಿಪಿ.4 ರಲ್ಲಿ ಟ್ರಕ್‌ನ ಚಾಲಕ ನಾನು ಸದರಿ ಟ್ರಕ್‌ನ್ನು ರಾಜಸ್ಥಾನ ಧಾಬಾದಲ್ಲಿ ಚಹಾ ಕುಡಿದು ರಸ್ತೆ ಪಕ್ಕದಲ್ಲಿದ್ದ ಲಾರಿಯನ್ನು ಚಾಲು ಮಾಡಿ ರಸ್ತೆಗೆ ತೆಗೆದುಕೊಂಡಾಗ ಹುಬ್ಬಳ್ಳಿ ಕಡೆಯಿಂದ ಬರುತ್ತಿದ್ದ ಮೋಟಾರ್ ವೆಹಿಕಲ್‌ಗೆ ಅಪಘಾತವಾಗಿದೆ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ. ನಿಪಿ.4 ರ ಬಗ್ಗೆ ವಕೀಲರ ಕಡೆಯಿಂದ ಕೇಳಿ ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ನಿಪಿ.4 ರಲ್ಲಿ ಬರೆದಿರುವ ವಿಚಾರವನ್ನು ತಿಳಿದುಕೊಂಡ ನಂತರ ಅದು ಸರಿ ಇದೆ ಎಂಬ ಕಾರಣಕ್ಕೆ ನಾನು ಹಾಜರಪಡಿಸಿರುತ್ತೇನೆ ಎಂದರೆ ಸಾಕ್ಷಿ ಅದು ಸರಿ ಇಲ್ಲ ಎಂಬ ಕಾರಣಕ್ಕೆ ಹಾಜರಪಡಿಸಿರುತ್ತೇನೆ ಎನ್ನುತ್ತಾರೆ ಮತ್ತು ಪೊಲೀಸರು ಬರೆದಿರುವುದು ಸುಳ್ಳಿದೆ ಎಂದು ನುಡಿಯುತ್ತಾರೆ. ನಿಪಿ.4 ರಲ್ಲಿ ಬರೆದಿರುವುದು ತಪ್ಪಿದೆ ಎಂಬ ಕಾರಣಕ್ಕೆ ಪೊಲೀಸರ ಮೇಲೆ ನೀವೇನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಟ್ರಕ್‌ನ್ನು ಚಾಲಕ ರಾಜಸ್ಥಾನ ಧಾಬಾದಿಂದ ರಸ್ತೆಗೆ ತೆಗೆದುಕೊಳ್ಳುವ ಸಮಯದಲ್ಲಿ ನಾನು ಹುಬ್ಬಳ್ಳಿ ಕಡೆಯಿಂದ ನಿಶ್ಕಾಳಜಿತನದಿಂದ ನನ್ನ ಬೈಕನ್ನು ಚಲಾಯಿಸಿಕೊಂಡು ಹೋಗಿ ಲಾರಿಗೆ ಡಿಕ್ಕಿಪಡಿಸಿದ್ದರಿಂದ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಕಿಮ್ಸನಲ್ಲಿ ನಾನು ದಾಖಲಾಗಿದ್ದಾಗ ನನ್ನ ತಮ್ಮ ಬಂದಿದ್ದ ಎಂದು ಹೇಳಿದ್ದು ಆ ಸಮಯದಲ್ಲಿ ಇದೇ ಟ್ರಕ್

ಬಂದು ನನಗೆ ಅಪಘಾತಪಡಿಸಿತು ಎಂದು ಅವರಿಗೆ ಹೇಳಿಲ್ಲ ಎಂದರೆ ಸಾಕ್ಷಿ ನಾನು ಆ ಸಮಯದಲ್ಲಿ ಹೇಳಿಲ್ಲ ಎಂದು ನುಡಿಯುತ್ತಾರೆ. ನನ್ನ ರೇಷನ್ ಕಾರ್ಡ ಬಿ ಪಿ ಎಲ್ ಇದೆ ಎಂದರೆ ಸರಿ. ಬಿ ಪಿ ಎಲ್ ರೇಷನ್ ಕಾರ್ಡ ಇದ್ದವರಿಗೆ ಕಿಮ್ಸನಲ್ಲಿ ಉಚಿತ ಚಿಕಿತ್ಸೆ ಕೊಡುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಈ ವಿಷಯ ಗೊತ್ತಿದ್ದರೂ ಕೂಡ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.9, 10, 11 ಕ್ಕೆ ಸಂಬಂಧಿಸಿದ ವೈದ್ಯರ ಸಲಹಾ ಚೀಟಿಗಳನ್ನು ನಾನು ಹಾಜರಪಡಿಸಿಲ್ಲ ಎಂದರೆ ಹೌದು ಎನ್ನುತ್ತಾರೆ. ಡ್ರೆಸ್ಸಿಂಗ್ ಸಂಬಂಧ ನಿಪಿ.12 ಕ್ಕೆ ಸಂಬಂಧಿಸಿದಂತೆ ವೈದ್ಯರು ಕಿಮ್ಸಗೆ ಬಾ ಎಂದು ಹೇಳಿದ್ದರಾ ಅಥವಾ ಹೊರಗಡೆ ಏನಾದರೂ ಚೀಟಿ ಬರೆದುಕೊಟ್ಟಿದ್ದರಾ ಎಂದರೆ ಸಾಕ್ಷಿ ಕಿಮ್ಸಗೆ ಬರುವಂತೆ ಹೇಳಿದ್ದರು ಎನ್ನುತ್ತಾರೆ. ನಿಪಿ.12 ಕ್ಕೆ ಸಂಬಂಧಿಸಿದ ಬಿಲ್ ನ್ನು ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಹಾಜರಪಡಿಸಿಲ್ಲ ಎನ್ನುತ್ತಾರೆ. ನಿಪಿ.14 ಮತ್ತು 15 ಕ್ಕೆ ಸಂಬಂಧಿಸಿದ ಸಲಹಾ ಚೀಟಿಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ. ಕಿಮ್ಸನಲ್ಲಿ ಹೊರಗಡೆ ಔಷಧಿ ತರಲು ಬರೆದುಕೊಟ್ಟಾಗ ನೀವೇನಾದರೂ ಬಿ ಪಿ ಎಲ್ ಕಾರ್ಡ ಇದೆ ನಾವು ಯಾವ ಕಾರಣಕ್ಕೆ ಹೊರಗಡೆ ತರಬೇಕೆಂದು ಕೇಳಿದಿರಾ ಎಂದರೆ ಸಾಕ್ಷಿ ಕೇಳಿಲ್ಲ ಎನ್ನುತ್ತಾರೆ. ನಿಪಿ.15 ರಲ್ಲಿ estimation ಇದ್ದು ಅದನ್ನು ಖರೀದಿ ಮಾಡಿದ ಬಗ್ಗೆ ಬಿಲ್ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಒಟ್ಟು ತೆಗೆದುಕೊಂಡು ಬಂದಿದ್ದೇನೆ ಎನ್ನುತ್ತಾರೆ. ನಿಪಿ.17, 18, 20, 22, 24 ಕ್ಕೆ ಸಂಬಂಧಿಸಿದ ವೈದ್ಯರ ಸಲಹಾ ಚೀಟಿಗಳು ಇಲ್ಲ ಎಂದರೆ ಸರಿ. ನಿಪಿ.19, 24 ಕ್ಕೆ ಸಂಬಂಧಿಸಿದಂತೆ ಅದು ಯಾರದು ಏನು ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.21 ಮತ್ತು 23 ಗೆ ಸಂಬಂಧಿಸಿದ ವೈದ್ಯರ ಬರೆದುಕೊಟ್ಟ ಸಲಹಾ ಚೀಟಿಗಳನ್ನು ನಾನು ಹಾಜರಪಡಿಸಿಲ್ಲ ಎಂದರೆ ಸರಿ. ನಿಪಿ.29 ರಲ್ಲಿ ಕಿಮ್ಸ ಆಸ್ಪತ್ರೆಯಲ್ಲಿರುವ

Blood bank ಗೆ ನನಗೆ ರಕ್ತ ಬೇಕು ಎಂದು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.31 ರ ಕೊನೆಯ ಪುಟದಲ್ಲಿ ಕಿಮ್ಸನವರೇ ತಮ್ಮ Blood bank ಗೆ ನನಗೆ O Positive blood ಬೇಕು ಎಂಬುದಾಗಿ ನೀವೇದನೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸುಮ್ಮನೆ ಇರುತ್ತಾರೆ. ನನಗೆ ಕಿಮ್ಸನವರು ಎಲ್ಲಾ ಚಿಕಿತ್ಸೆಯನ್ನು ಉಚಿತವಾಗಿ ಕೊಟ್ಟಿರುತ್ತಾರೆ ಆದರೂ ನಾನು ಬಿಲ್‌ಗಳನ್ನು ಹಾಜರಪಡಿಸಿದ್ದು ಅವುಗಳು ಹೆಚ್ಚಿನ ಪರಿಹಾರ ಪಡೆಯಲು ಸೃಷ್ಟಿ ಮಾಡಿದವು ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ನಿಶ್ಕಾಳಜಿತನದಿಂದ ಆಗಿದೆ ಎಂದರೆ ಸರಿಯಲ್ಲ. ಆ ವಿಷಯ ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾನು ಟ್ರಕ್‌ನ ಮೇಲೆ ಒಂದು ಸುಳ್ಳು ಕೇಸ್ ದಾಖಲಿಸಿ ಸುಳ್ಳು ಸಾಕಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**